## ಸಾಮಾಜಿಕ ಸ್ಥಿತಿಗತಿಗಳು


ಅಂಕಿ– ಸಂಖ್ಯೆಗಳ ಗೋಜಲಿಗೆ ಸಿಕ್ಕಿಕೊಳ್ಳದೆ ಎಲ್ಲರೂ ಒಪ್ಪುವ ವಿಚಾರವೆಂದರೆ ವರ್ತಮಾನದಲ್ಲಿ ಹೊರಸಂಬಂಧಗಳು ನಮ್ಮ ದೇಶದಲ್ಲೂ ಹೆಚ್ಚುತ್ತಿವೆ ಮತ್ತು ಇದು ವೈವಾಹಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮವನ್ನು ಬೀರುತ್ತಿದೆ ಎನ್ನುವುದು. ಇದಕ್ಕೆ ಕೆಲವು ಪ್ರಮುಖ ಕಾರಣಗಳನ್ನು ಗುರುತಿಸಬಹುದು.

1 ಒಟ್ಟು ಕುಟುಂಬಗಳಿಂದ ಹೊರಬಂದು ಬದುಕುತ್ತಿರುವ ಪತಿ–ಪತ್ನಿಯರ ಮೇಲೆ ದುಡಿಯುವ, ಮನೆಕೆಲಸ ಮಾಡುವ, ಮಕ್ಕಳನ್ನು ನೋಡಿಕೊಳ್ಳುವ ಮುಂತಾದ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸುವ ಒತ್ತಡವಿರುತ್ತದೆ. ಇವುಗಳ ಮಧ್ಯೆ ಮುಕ್ತವಾಗಿ ಕಾಮಸುಖವನ್ನು ಹಂಚಿಕೊಳ್ಳಲಾಗದೆ ಅವರು ತಮಗರಿವಿಲ್ಲದೆಯೇ ಅತೃಪ್ತರಾಗಬಹುದು. ಹಾಗಾಗಿ ಇಂತಹ ಯಾವುದೇ ಜವಾಬ್ದಾರಿಗಳಿಲ್ಲದೆ ಕೇವಲ ಲೈಂಗಿಕ ಸುಖಕ್ಕಾಗಿ ಮಾತ್ರ ಇರುವ ಸಂಬಂಧಗಳ ಕಡೆ ಅವರು ಕೆಲವೊಮ್ಮೆ ಆಕರ್ಷಿತರಾಗುವುದು ಸಹಜವಾಗಬಹುದು.

2 ಉದ್ಯೋಗದ ಸ್ಥಳಗಳಲ್ಲಿ, ಪಾರ್ಟಿಗಳಲ್ಲಿ ಅಥವಾ ಇತರ ಸಾಮಾಜಿಕ ಮಾಧ್ಯಮಗಳಲ್ಲಿ ಕಳೆಯುವ ಸಮಯ ಹೆಚ್ಚುತ್ತಾ ಬಂದಿದೆ. ಹೀಗೆ ಸ್ತ್ರೀ–ಪುರುಷರ ನಡುವೆ ಹೆಚ್ಚಿದ ಒಡನಾಟ ಸಹಜವಾಗಿ ಭಾವನಾತ್ಮಕ ಸೆಳೆತವಾಗಿ ಮಾರ್ಪಡುವುದಕ್ಕೆ ಅವಕಾಶವಾಗಬಹುದು.

3 ಪುರುಷಕೇಂದ್ರಿತ ಸಮಾಜದಲ್ಲಿ ಪುರುಷರಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದ ಹೊರಸಂಬಂಧದ ಒತ್ತಾಸೆಗಳು ಈಗ ಸ್ತ್ರೀಯರಲ್ಲೂ ಕಂಡುಬರುತ್ತಿವೆ. ಸ್ತ್ರೀಯರು ತಮ್ಮೊಳಗಿನ ಲೈಂಗಿಕತೆಯನ್ನು ಗುರುತಿಸಿಕೊಳ್ಳುತ್ತಾ ಬಂದಂತೆ ಅದನ್ನು ಪಡೆದುಕೊಳ್ಳಲು ಸಹಜವಾಗಿ ಇಚ್ಛಿಸುತ್ತಿದ್ದಾರೆ. ಗರ್ಭನಿರೋಧಕಗಳು, ವಿದ್ಯಾಭ್ಯಾಸ, ಆರ್ಥಿಕ ಸ್ವಾತಂತ್ರ್ಯ ಮುಂತಾದವುಗಳೆಲ್ಲಾ ಇದಕ್ಕೆ ಇಂಬು ನೀಡುತ್ತಿವೆ.

4 ಸಮಾಜ ಮುಕ್ತವಾಗುತ್ತಾ ಬಂದಂತೆ ಹೊಸ ಚಿಂತನೆಗಳು ಮತ್ತು ಜೀವನಶೈಲಿಗಳು ಬರುವುದು ಅನಿವಾರ್ಯ.



ಈ ಎಲ್ಲಾ ಕಾರಣಗಳ ಆಧಾರದ ಮೇಲೆ ಕಾಲವನ್ನು ಹಿಂತಿರುಗಿಸಿ ನಾವೆಲ್ಲಾ ನಮ್ಮ ಇತಿಹಾಸದ ಭವ್ಯಭಾರತಕ್ಕೆ ಹೋಗಬೇಕು ಎಂದು ಸಾಕಷ್ಟು ಜನರಿಗೆ ಅನ್ನಿಸಬಹುದು. ಹಿಂದೆಲ್ಲಾ ರಾಜ ಮಹಾರಾಜರು ಮತ್ತು ಶ್ರೀಮಂತ ಪುರುಷ ವರ್ಗಕ್ಕೆ ಉಪಪತ್ನಿಯರನ್ನು ಹೊಂದುವುದು ಪ್ರತಿಷ್ಠೆಯ ವಿಷಯವಾಗಿತ್ತು. ಹೆಚ್ಚು ಸುಂದರಳಾದ ಮತ್ತು ಹೆಚ್ಚು ಜನ ಉಪಪತ್ನಿಯರಿದ್ದಷ್ಟೂ ಅವರ ಸಾಮಾಜಿಕ ಸ್ಥಾನಮಾನಗಳು ಹೆಚ್ಚಾಗುತ್ತಿದ್ದವು. ಪತಿಯಿಂದ ದೂರ ಬದುಕುವುದು ಸಾಮಾಜಿಕವಾಗಿ ಅವಮಾನಕರ, ಧಾರ್ಮಿಕವಾಗಿ ನಿಷಿದ್ಧ ಮತ್ತು ಆರ್ಥಿಕವಾಗಿ ಕಷ್ಟಕರವಾದ್ದರಿಂದ ವಿವಾಹಿತ ಸ್ತ್ರೀಯರು ಪುರುಷರ ಹೊರ ಸಂಬಂಧಗಳನ್ನು ಅನಿವಾರ್ಯವೆಂದು ಒಪ್ಪಿಕೊಂಡಿದ್ದರು. ಇದರ ಅರ್ಥ ಹಿಂದಿನ ಕಾಲದಲ್ಲಿ ಪತ್ನಿಯರು ಪತಿಯ ಹೊರ ಸಂಬಂಧಗಳಿಗೆ ಒಪ್ಪಿಗೆ ನೀಡಿದ್ದರು ಅಥವಾ ಇತರ ಮಹಿಳೆಯರ ಜೊತೆ ದೈಹಿಕ ಸಂಬಂಧವಿದ್ದ ಪತಿಯೊಡನೆ ಆತ್ಮೀಯತೆ, ಸಮಾಧಾನಗಳಿಂದ ಬದುಕುತ್ತಿದ್ದರು ಎಂದೇನಲ್ಲ. ಹೀಗಾಗಿ ಸ್ತ್ರೀಯರಿಗೆ ಸಿಗಲೇಬೇಕಾದ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳುತ್ತಲೇ ಬದಲಾದ ಕಾಲಘಟ್ಟದಲ್ಲಿ ವಿವಾಹಬಾಹಿರ ಸಂಬಂಧಗಳನ್ನು ನೋಡುವ ಪ್ರಯತ್ನ ಮಾಡೋಣ.

## ಇದು ರೋಚಕವೇ?

ವಿವಾಹಬಾಹಿರ ಸಂಬಂಧಗಳಿಂದಾಗಿ ಅಥವಾ ಅವು ಇದೆಯೆಂಬ ಅನುಮಾನ ಬಂದಿರುವ ಕಾರಣಕ್ಕಾಗಿ ನಡೆಯುವ ಹಿಂಸೆ, ಹೊಡೆದಾಟ, ಕೊಲೆಗಳ ಬಗೆಗಂತೂ ದಿನನಿತ್ಯ ಕೇಳುತ್ತಿರುತ್ತೇವೆ. ಇಂತಹ ಅನೈತಿಕ ಸಂಬಂಧಗಳ ಜೊತೆಗೆ ಆಸ್ತಿ, ಹಣವೂ ಸೇರಿಕೊಂಡರೆ ಮಹಾಯುದ್ಧಗಳೇ ನಡೆದು ಸಾಕಷ್ಟು ಸಾವು–ನೋವುಗಳಾಗಬಹುದು. ಎಷ್ಟೋ ಟೀವಿ ವಾಹಿನಿಗಳಿಗೆ ಇಂತಹ ಘಟನೆಗಳು ರಸವತ್ತಾದ ಕ್ರೈಂ ಸ್ಟೋರಿಗಳನ್ನು ಒದಗಿಸುತ್ತವೆ. ಹಲವಾರು ಟ್ಯಾಬ್ಲಾಯ್ಡ್ ಪತ್ರಿಕೆಗಳು ಮುಖಪುಟದಲ್ಲಿ ಇಂತಹ ರೋಚಕ ಸುದ್ದಿಗಳನ್ನು ಪ್ರಕಟಿಸಿ ತಮ್ಮ ಪ್ರಸಾರವನ್ನು ಹೆಚ್ಚಿಸಿಕೊಳ್ಳುತ್ತವೆ. ಮೇಲುನೋಟಕ್ಕೆ ಹೊರಸಂಬಂಧಗಳ ಬಗ್ಗೆ ಅಸಹ್ಯಪಟ್ಟುಕೊಳ್ಳುವಂತೆ ತೋರಿಸಿಕೊಳ್ಳುವ ಸಾಕಷ್ಟು ಜನ ಇವೆಲ್ಲವುಗಳನ್ನು ಗುಟ್ಟಾಗಿ ಸವಿಯಬಹುದು! ಅಂದರೆ ಬೇರೆಯವರ ಮನೆಯ ವಿವಾಹಬಾಹಿರ ಸಂಬಂಧಗಳು ನಮಗೆ ಮನರಂಜನೆ, ರೋಮಾಂಚನಗಳನ್ನು ಒದಗಿಸಲು ಸಾಧ್ಯವಿದೆ ಎಂದಾಯಿತು!

ಮಧ್ಯವಯಸ್ಸಿನ ಪುರುಷರೊಬ್ಬರು ಲೈಂಗಿಕ ಸಮಸ್ಯೆಗಾಗಿ (ನಿಮಿರು ದೌರ್ಬಲ್ಯ) ಸಹಾಯ ಕೇಳಿಕೊಂಡು ಬಂದಿದ್ದರು. ಎಲ್ಲಾ ವಿವರಣೆಗಳನ್ನು ಪಡೆದುಕೊಂಡ ಮೇಲೆ ಮರುದಿನ ಪತ್ನಿಯನ್ನು ಕರೆದುಕೊಂಡು ಬರಲು ಹೇಳಿದೆ. ಆ ವ್ಯಕ್ತಿ ಅನುಮಾನಿಸತೊಡಗಿದರು. ನಂತರ ಮಾತನಾಡುತ್ತಾ ಹೋದಾಗ ತಿಳಿದುಬಂದ ವಿಚಾರವೆಂದರೆ ಅವರಿಗೆ ವಿವಾಹಬಾಹಿರ ಸಂಬಂಧವಿದ್ದು ಅಲ್ಲಿ ಇವರ ಲೈಂಗಿಕ ಸಮಸ್ಯೆ ಕಾಡುತ್ತಿತ್ತು. ಹಿಂಜರಿಕೆ, ಪಾಪಪ್ರಜ್ಞೆ, ಭಯ, ಆತಂಕಗಳಿಂದಲೇ ತಮ್ಮ ಪ್ರೇಯಸಿಯರ ಬಳಿ ತೆರಳುವ

## ಇತಿಹಾಸದ ದಾಖಲೆ ಇಲ್ಲ

ದುರದೃಷ್ಟಕರ ವಿಚಾರವೆಂದರೆ ವಿವಾಹಬಾಹಿರ ಸಂಬಂಧಗಳ ಇತಿಹಾಸವನ್ನು ಎಲ್ಲಿಯೂ ದಾಖಲಿಸಲಾಗಿಲ್ಲ! ಎಲ್ಲಾ ಧರ್ಮದ ಗ್ರಂಥಗಳಲ್ಲಿ ಇದರ ಅನೈತಿಕತೆಯ ಬಗ್ಗೆ ಬರೆಯಲಾಗಿದೆ. ಹೆಚ್ಚಿನ ಪ್ರಾಚೀನ ಸಂಸ್ಕೃತಿಗಳೂ ವಿವಾಹಬಾಹಿರ ಸಂಬಂಧಗಳನ್ನು ಮಾಡುವವರಿಗೆ ಅತ್ಯಂತ ಕಠಿಣ ಶಿಕ್ಷೆಯನ್ನು ನೀಡುತ್ತಿದ್ದವು. ಸಾಕಷ್ಟು ಸುಪ್ರಸಿದ್ಧ ಸಾಹಿತ್ಯ ಕೃತಿಗಳಲ್ಲಿ ವಿವಾಹಬಾಹಿರ ಸಂಬಂಧಗಳನ್ನು ನಿರೂಪಿಸಲಾಗಿದೆ. ಗುಸ್ತಾವ್ ಫ್ಲಾಬರ್ಟ್‌ನ ಮ್ಯಾಡಮ್ ಬಾವರಿ, ಟಾಲ್‌ಸ್ಟಾಯ್‌ನ ಅನ್ನಾ ಕರೆನಿನಾ ಮತ್ತು ಡಿ ಹೆಚ್ ಲಾರೆನ್ಸ್‌ನ ಲೇಡಿ ಚಾಟರ್ಲೀಸ್ ಲವರ್‌ಗಳನ್ನು ಉದಾಹರಿಸಬಹುದು. ಇವೆಲ್ಲವನ್ನೂ ನೋಡಿದರೆ ಹೊರಸಂಬಂಧಗಳು ವಿಚ್ಛೇದನದಂತೆ ವೈವಾಹಿಕ ವ್ಯವಸ್ಥೆ ರೂಪುಗೊಂಡ ಕೆಲವೇ ನಿಮಿಷಗಳಲ್ಲಿ ಪ್ರಾರಂಭವಾಗಿರಬೇಕು!